ಕಂಡುಬರುತ್ತಿದ್ದ ಈ ಹೊಂದಾಣಿಕೆ ಸಾವಿನ ಕ್ರಿಯೆಗಳನ್ನು ಮಾಡುವಾಗಲೂ ಇರುತ್ತಿತ್ತು. ಇತರರಿಗೆ ನೆರವಾಗುವ ಎಲ್ಲ ಕಾರ್ಯಗಳೂ ಹೊಸಪಾಳ್ಯದ ಕೆಂಪಮ್ಮಜ್ಜಿ, ಹನುಮೇಗೌಡರು ಮತ್ತು ಬೆಳ್ಳಾವೆಪ್ಪ ಇವರ ನೇತೃತ್ವದಲ್ಲೇ ನಡೆಯುತ್ತಿದ್ದವು. ಅಲ್ಲಿದ್ದವರೆಲ್ಲಾ ಮನುಷ್ಯತ್ವದ ಮೇಲೆ ಅಚಲ ವಿಶ್ವಾಸ, ನಂಬಿಕೆಗಳುಳ್ಳ ಅಪ್ಪಟ ಸ್ವಾಭಿಮಾನಿಗಳು. ಯಾರು ಯಾರನ್ನೂ ದುರ್ಬಲಗೊಳಿಸಲು ಪ್ರಯತ್ನಿಸುತ್ತಿರಲಿಲ್ಲ. ಆದ್ದರಿಂದಲೇ ಅಲ್ಲಿ ತರತಮದ ವಿಷದ ಗಾಳಿ ಎಂದೂ ಬೀಸಲಿಲ್ಲ.

ಇಡೀ ಹೊಸಪಾಳ್ಯದಲ್ಲಿ ಶಿಕ್ಷಣ ಪಡೆದವರು ಇಬ್ಬರು ಮಾತ್ರ. ಅವರಲ್ಲಿ ಲೇವಾದೇವಿ ಮಾಡುತ್ತಿದ್ದ ಚಿಕ್ಕಣ್ಣಪ್ಪನವರ ಮಗ ಸಂಜೀವಯ್ಯ ಮತ್ತು ಮುಕುಂದಪ್ಪನವರ ಮಗ ಶ್ರೀನಿವಾಸಯ್ಯ. ಇನ್ನುಳಿದವರು ಶಾಲೆಯ ಮುಖ ನೋಡಿದವರಲ್ಲ! ಆದರೆ ನಿಸರ್ಗ ಕಲಿಸಿದ ಸೌಹಾರ್ದತೆಯ ಪಾಠವನ್ನು ಉಳಿದವರಿಗಿಂತ ಹೆಚ್ಚು ಕಲಿತು ಅದನ್ನು ಆಚರಣೆಗೆ ತಂದವರು ಹೊಸಪಾಳ್ಯದಲ್ಲಿದ್ದ ಜನರು. 'ಮನುಷ್ಯರೆಲ್ಲ ಒಬ್ಬನೇ ದೇವನ ಮಕ್ಕಳು' ಎನ್ನುವ ತತ್ತ್ವ ಇಲ್ಲಿ ಸಾಕಾರಗೊಂಡಿತ್ತು. ಇವೆಲ್ಲವೂ ಸೌಹಾರ್ದತೆಯ ಪರಂಪರೆಯಲ್ಲಿ ಸಹಜವಾಗಿ ಬೆರತಿರುವ, ಎಲ್ಲರೂ ಅನುಸರಿಸಬಹುದಾದ ನಡೆಗಳು.

ಮುಕುಂದಪ್ಪನವರು ವಾಸವಿದ್ದದ್ದು ಕೇರಿಯ ಒಂದು ಅಂಚಿಗಿದ್ದ ಸಣ್ಣ ಮಾಳಿಗೆ ಮನೆಯಲ್ಲಿ. ಅದೂ ಸ್ವಂತದ್ದಲ್ಲ! ಅಲ್ಲಿನ ತಿಗಳರು ಕೊಟ್ಟ ಬಾಡಿಗೆ ಮನೆ ಅದು. ತಮ್ಮ ಪತ್ನಿ ರಂಗಮ್ಮನವರೊಂದಿಗೆ ಏಳು ಜನ ಮಕ್ಕಳು ಆ ಪುಟ್ಟ ಮಾಳಿಗೆ ಮನೆಯಲ್ಲಿ ವಾಸವಿದ್ದರು. ಮನೆಯಲ್ಲಿ ಬಡತನವೆಂಬುದು ಅವರಿಗೆ ಬಳುವಳಿಯಾಗಿ ಬಂದಿತ್ತು. 'ಮನುಷ್ಯನ ನೆಮ್ಮದಿ, ಸುಖ ಸಂತೋಷಗಳು ನೈತಿಕ ನಿಯಮಗಳ ಅನುಸರಣೆಯಲ್ಲೇ ಅಡಗಿವೆ' ಎಂಬ ಗಾಂಧಿ ಚಿಂತನೆ ಮುಕುಂದಪ್ಪನವರ ವ್ಯಕ್ತಿತ್ವವನ್ನು ಆಳವಾಗಿ ಆವರಿಸಿತ್ತು. ತಮ್ಮ ಅಣ್ಣತಮ್ಮಂದಿರಿಂದ ದೂರ ಉಳಿದು ಗುಬ್ಬಿ ಪಟ್ಟಣಕ್ಕೆ ಹೊಸೆದುಕೊಂಡಿದ್ದ ಹೊಸಪಾಳ್ಯದ ತಿಗಳರ ಕೇರಿಯಲ್ಲಿ ನೆಲೆನಿಂತಿದ್ದರು. ಸಿಂಗೋನಹಳ್ಳಿ, ಜೈನಿಗರ ಹಳ್ಳಿ ಹಾಗೂ ಹೊಸಪಾಳ್ಯದಲ್ಲಿದ್ದ ರೈತರಿಗೆ ಕ್ಷೌರ ಮಾಡಿ ಬಂದ ಚೂರು ಪಾರು ಕಾಸಿನಿಂದ ಹಾಗೂ ರೈತರು ವರ್ಷಕ್ಕೊಮ್ಮೆ ಕೊಡುತ್ತಿದ್ದ 'ಹಡದಿ'ಯಿಂದ (ರೈತರು ವರ್ಷಕ್ಕೊಮ್ಮೆ ಸುಗ್ಗಿ ಕಾಲದಲ್ಲಿ ಕೊಡುತ್ತಿದ್ದ ದವಸ ಧಾನ್ಯ, ಕಾಳು ಕಡ್ಡಿ) ಜೀವನ ನಿರ್ವಹಿಸುತ್ತಿದ್ದರು.

ಸಮಾಜ 'ಹೀನ' ಕಾರ್ಯವೆಂದು ತಿಳಿದಿದ್ದ ಕ್ಷೌರಿಕ ವೃತ್ತಿಯನ್ನೇ ಜ್ಞಾನದ ಸಾಧನವನ್ನಾಗಿ ಪರಿವರ್ತಿಸಿಕೊಂಡ ಮುಕುಂದಪ್ಪನವರು ಸಣ್ಣ ಪ್ರಮಾಣದ ವೈದ್ಯವನ್ನೂ ಮಾಡುತ್ತಿದ್ದರು. ಕಣ್ಣು ಬೇನೆಗೆ ಅವರು ನೀಡುತ್ತಿದ್ದ ಮದ್ದು ಎಲ್ಲರಿಂದಲೂ ಮಾನ್ಯ ಪಡೆದಿತ್ತು. ನಂದಬಟ್ಟಲು ಹೂವಿಗೆ ಹಸುವಿನ ಬೆಣ್ಣೆ ಹಾಗೂ ಇತರ ಕಚ್ಚಾ ವಸ್ತು ಸೇರಿಸಿ ಅವರು ಮಾಡುತ್ತಿದ್ದ ಮುಲಾಮು ಕಣ್ಣು ನೋವಿಗೆ ರಾಮಬಾಣವಾಗಿತ್ತು. ಅದನ್ನೂ ಕೂಡ ಅವರು ದುಡ್ಡಿಗಾಗಿ ಮಾಡುತ್ತಿರಲಿಲ್ಲ! ತಮಗಿದ್ದ ಹಣಕಾಸಿನ ತೊಂದರೆಯಿಂದಾಗಿ ಸ್ವಂತದ್ದೆಂದು ಒಂದು ಅಂಗಡಿಯನ್ನು ತೆರೆಯಲು ಕೂಡ ಅವರಿಂದ ಸಾಧ್ಯವಾಗಿರಲಿಲ್ಲ. ಮನೆಯ ಜಗುಲಿ ಕಟ್ಟೆಗಳೇ ಅವರ ಅಂಗಡಿಯಾಗಿತ್ತು. ಇಷ್ಟಿದ್ದರೂ ಮುಕುಂದಪ್ಪನವರು ಎಂದೂ ತಾವು ಅನುಭವಿಸಿದ ಬದುಕಿನ ಬಡತನವನ್ನು ಕುರಿತು ಯಾರ ಮುಂದೆಯೂ ಸ್ವಮರುಕುದಿಂದ ಪ್ರಲಾಪಿಸುತ್ತಿರಲಿಲ್ಲ, ಹಾಗೆಯೇ ಭವಿಷ್ಯದ ದಿನಗಳಿಗಾಗಿ ಯೋಚಿಸುತ್ತಿರಲಿಲ್ಲ!

ಮುಕುಂದಪ್ಪನವರು ಬೆಳಗ್ಗೆಯಿಂದ ಮಧ್ಯಾಹ್ನ ಹನ್ನೆರೆಡು ಗಂಟೆಯವರೆಗೆ ಹಳ್ಳಿಗಳಿಗೆ ಹೋಗಿ ಕ್ಷೌರದ ಕಾರ್ಯ ಮುಗಿಸಿಕೊಂಡು ಬರುತ್ತಿದ್ದರು. ಮಧ್ಯಾಹ್ನ ಹನ್ನೆರಡರ ನಂತರ ಯಾರೇ ಜುಲುಮೆ ಮಾಡಿದರೂ ಇವರು ಕ್ಷೌರ ಮಾಡಲು ಎಲ್ಲಿಗೂ ಹೋಗುತ್ತಿರಲಿಲ್ಲ! ಇದು ಅವರು ತಮ್ಮ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದ ಒಂದು ನಿಯಮ. ಬಡತನದ ಎಳೆ ಕಾಣದ